# ಮಹಿಳಾ ತತ್ವಪದಕಾರ್ತಿಯರ ಅನುಭಾವದ ನೆಲೆ

**ಸಂತೋಷ ಹೆಚ್. ಎಸ್**
ಸಂಶೋಧನಾ ವಿದ್ಯಾರ್ಥಿ,
ಎಫ್. ಎಂ. ಕೆ. ಎಂ. ಸಿ ಕಾಲೇಜು,
ಮಡಿಕೇರಿ 571201
ಮಂಗಳೂರು ವಿಶ್ವವಿದ್ಯಾನಿಲಯ.
Santhupriya786@gmail.com

'ಅನುಭಾವ' ಎಂಬ ಶಬ್ದಕ್ಕೆ ಸಂಸ್ಕೃತ ಕೋಶದಲ್ಲಿ 'ಘನತೆ' 'ಕಾಂತಿ' ಎಂಬ ಅರ್ಥಗಳುಂಟು ಪ್ರತಿಯೊಬ್ಬರಿಗೂ ಘನತೆ ಮತ್ತು ಕಾಂತಿಯು ಲಭಿಸಿವುದು ಅವರು ಪರಮಾತ್ಮನಿಂದ ಪಡೆದ ಅನುಸಂಧಾನದಿಂಧ ಮಾತ್ರ ಹೀಗೆ ಇಂದ್ರೀಯಗಳ ಮೂಲಕ ವಸ್ತುವಿನ ಪ್ರತ್ಯಕ್ಷ ಸಂಪರ್ಕದಿಂದ ಪಡೆದುದು ಅನುಭವವಾದರೆ ಆ ಅನುಭವ ಅಂತರಂಗಕ್ಕೆ ಹೊಳೆದ ಅನುಭವದ ಸ್ಥಿತಿಯು ನೆಲೆಗೊಂಡು ನಿಲ್ಲುವ ಅವಸ್ಥೆಯು 'ಅನುಭವ'ವಾಗುತ್ತದೆ. ಹೀಗೆ ತತ್ವಪದಗಾರ್ತಿಯರು ಸಮಾಜದಲ್ಲಿ ತಾವು ಕಂಡುಂಡ ಅನುಭವಗಳನ್ನು, ಅನುಭವಿಸಿದ ಅನುಭಾವದ ಸ್ವರೂಪ ವಿಶೇಷತೆಗಳನ್ನು ತತ್ವಪದಗಳ ಮೂಲಕ ಹಾಡಿ ತಮ್ಮದೆ ದಾಟಿಯಲ್ಲಿ ಲೋಕವೈರುಧ್ಯಗಳನ್ನು ಜನಸಮಾನ್ಯರ ಮುಂದಿಟ್ಟಿದ್ದಾರೆ. ತತ್ವಪದಕಾರ್ತಿಯರ ಆಶಯ ಪರಮಾತ್ಮನನ್ನು ಅಂತರಂಗದ ಶುದ್ಧಿಯಿಂದ ಒಲಿಸಿಕೊಂಡು ಮುಕ್ತಿ ಪಡೆಯುವುದಾಗಿದೆ.

ಶತ-ಶತಮಾನಗಳಿಂದಲೂ ಮಹಿಳೆಯು ತನ್ನೊಳಗಿನ ಭಾವನೆಯನ್ನು ಸಮಾಜದ ಮುಂದೆ ತೋಡಿಕೊಳ್ಳಲಾಗದೆ ಮೌನಿಯಾಗಿ ಜೀವನ ನಡೆಸುತ್ತ ಸಮಾಜದ ಕಟ್ಟುಪಾಡಿನ ಸಂಸ್ಕೃತಿ, ಸಂಪ್ರಾದಾಯದ ಸಂಕೋಲೆಗೆ ಬಲಿಯಾಗಿದ್ದಳು. ಇಂತಹ ಸಂದಿಗ್ದ ವಾತಾವರಣದಲ್ಲಿ ಇತಿಹಾಸದಲ್ಲಿ ಮೊದಲ ಬಾರಿಗೆ ಮಹಿಳೆಯರು ಬಾಯ್ಬಿಟ್ಟು ತಮ್ಮೊಳಗಿನದನ್ನು ಜಗತ್ತಿಗೆ ತಿಳಿಯಪಡಿಸತೊಡಗಿದ್ದು ವಚನಗಾರ್ತಿಯರ ವಚನಗಳಿಂದ ಹನ್ನೆರಡನೆ ಶತಮಾನದ ಅಕ್ಕಮಹಾದೇವಿ, ನಿಲಾಂಬಿಕೆ, ಅಮುಗೆರಾಯಮ್ಮ, ಆಯ್ದಕ್ಕಿ ಲಕ್ಕಮ್ಮ ಮುಂತಾದ ವಚನಗಾರ್ತಿಯರು, ತಮಗೆ ಅನುಭವ ಮಂಟಪದಲ್ಲಿ ದೊರಕಿದ ಸ್ವಾತಂತ್ರ, ಶರಣರು ನೀಡಿದ ಪ್ರೋತ್ಸಾಹ ಸಾಹಿತ್ಯ ರಚನೆಗೆ ಅನುವು ಮಾಡಿಕೊಟ್ಟಿತು.

ಜಗತ್ತಿನಲ್ಲಿಯೇ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಚರ್ಚೆಗೆ ಒಳಗಾದವಳು ಮಹಿಳೆ ಇತಿಹಾಸದ ಪುಟ-ಪುಟಗಳಲ್ಲೂ ಮಹಿಳೆಯು ಶೋಷಣೆಗೆ ಒಳಗಾಗಿರುವುದನ್ನು ಕಾಣಬಹುದು. ಮಹಿಳೆಯರು ಪುರುಷ ಕೇಂದ್ರಿತ ವ್ಯವಸ್ಥೆಯಲ್ಲಿ ತಮ್ಮ ಕೊರಳ ದನಿಯನ್ನು ಕಳೆದುಕೊಂಡು ಅಕ್ಷರ ವಂಚಿತಳಾಗಿ ಕೇವಲ ನಾಲ್ಕು ಗೋಡೆಗಳ ಮಧ್ಯೆ ಉಳಿದು ಪತಿಸೇವೆ, ಮಕ್ಕಳ ಪಾಲನೆ-ಪೋಷಣೆ, ಗೃಹಕೃತ್ಯಗಳನ್ನು ಜರುಗಿಸುತ್ತ ಮೌನಿಯಾಗಿ ಜೀವಿಸುತ್ತಿದ್ದಾಳೆ. ಅನಂತರ ಜನಮನ್ನಣೆ ಪಡೆದ ತತ್ವಪದ ಸಾಹಿತ್ಯವು ಸಮಾಜದ ಜನರ ಜೀವನಾಡಿಯಂತೆ ಜನ ಜೀವನದ ಅನುಭವಗಳನ್ನು ಸಾಹಿತ್ಯವಾಗಿ ರಚಿಸಿ ಜನ ಮನ್ನಣೆ ಪಡೆಯಿತು. ಇಲ್ಲಿ ತತ್ವಪದಕಾರರಂತೆ. ತತ್ವಪದಗಾರ್ತಿಯರು ತಮ್ಮೊಳಗಿನ ಅನುಭವಗಳನ್ನು

ಪದದ ಮೂಲಕ ಹಿಡಿದಿಟ್ಟು ಜನಮನ್ನಣೆ ಪಡೆದಿದ್ದಾರೆ. ಪುರುಷ ತತ್ವಪದಕಾರರು ಮಹಿಳಾ ತತ್ವಪದಗಾರ್ತಿಯರಿಗೆ ನೀಡಿದ ಸ್ವಾತಂತ್ರ, ಸಮಾನತೆ ಪ್ರೋತ್ಸಹದಿಂದ ಮಹಿಳಾ ತತ್ವಪದಗಾರ್ತಿಯರು ಉತ್ಸಹದಿಂದ ತಮ್ಮ ದಿನನಿತ್ಯದ ಬದುಕು ಭವಣೆಯ ಅನುಭವಗಳನ್ನು ತತ್ವಪದವಾಗಿ ರಚಿಸಿ ಮಹಿಳಾ ಅಭಿವ್ಯಕ್ತಿಯನ್ನು ಜಗತ್ತಿಗೆ ಸಾರಿದರು. ಮಹಿಳಾ ತತ್ವಪದಗಾರ್ತಿಯರು ತಮ್ಮೊಳಗಿನ ಕೀಳರಿಮೆ, ಹಿಂಜರಿತ, ಸಂಕುಚಿತ ಭಾವನೆ ಸಂಪ್ರದಾಯಿಕ ಮೌಢ್ಯದಿಂದೊಡಗೂಡಿದ ಜಾಡ್ಯದಿಂದ ಕೊಡವಿಕೊಂಡು ಮೇಲೆದ್ದು ಮಹಿಳೆಯರು ತತ್ವಪದ ರಚಿಸಿದ್ದು ಕ್ರಾಂತಿಕಾರಕ ಬೆಳವಣಿಗೇಯೇ ಹೌದು.

ಪ್ರಸ್ತುತ "ಮಹಿಳಾ ತತ್ವಪದಗಾರ್ತಿಯರ ಅನುಭಾವಿಕ ನೆಲೆ" ಎಂಬ ಲೇಖನಕ್ಕೆ ಆರಿಸಿಕೊಂಡ ತತ್ವಪದಗಾರ್ತಿಯರು ಪ್ರಗತಿಪರರಾಗಿ, ನೈತಿಕ ಹೋರಾಟದ ಚಿಂತಿಕಿಯರಾಗಿ ಕಾಣಿಸುತ್ತಾರೆ. ಬಿದನೂರಿನ ಗಂಗಮ್ಮ, ಜತ್ತ ಶಿವಲಿಂಗವ್ವ, ತಾವರೆಕೆರೆ ವೀರದಾಸಮ್ಮ, ರಾಯಚೂರಿನ ಹನುಮಂತವ್ವ, ಮತ್ತು ಫೈಮುದಾ ಫಾತಿಮಾರೆಲ್ಲಾರು ತತ್ವಪದಗಾರರ ಆಶ್ರಯ ಪಡೆದು, ಅವರನ್ನೆ ಗುರುವಾಗಿ ಸ್ವಿಕರಿಸಿ ಪದಗಳನ್ನು ರಚಿಸಿ ಖ್ಯಾತಿ ಪಡೆದಿದ್ದಾರೆ.

ಬಿದನೂರಿನ ಗಂಗಮ್ಮ ವಿರೂಪಾಕ್ಷರನ್ನು ಗುರುವಾಗಿಯೂ–ಪತಿಯಾಗಿಯೂ ಸ್ವಿಕರಿಸಿ ಗುರುವಿನೊಡನೆ ಅನುರಕ್ತಳಾಗಿ ಕಡಕೋಳರಿಗೆ ಜನ್ಮ ನೀಡಿ ತಮ್ಮ ಅನುಭಾವವನ್ನು ತತ್ವಪದದಲ್ಲಿ ಹಿಡಿದಿಟ್ಟಿದ್ದಾರೆ. ರಾಯಚೂರಿನ ಹನುಮಂತವ್ವ ವೆಂಕಮ್ಮಾವಧೂತೆಯನ್ನು ಗುರುವಾಗಿ ಸ್ವಿಕರಿಸಿ ಲೌಕಿಕ ಬದುಕಿನಿಂದ ಪಾರಾಗಲು ಪತಿಗೆ ಮತ್ತೋಂದು ವಿವಾಹ ಮಾಡಿಸಿ ವಿರಕ್ತಳಾದಳು. ಜತ್ತ ಶಿವಲಿಂಗವ್ವ ಇಂಚಗೇರಿ ಪರಂಪರೆಯ ಸಾಧಕರಲ್ಲಿ ತನ್ನದೇ ಛಾಪೊಂದನ್ನು ಮೂಡಿಸಿದ್ದಾಳೆ. ಈಕೆ ಎಳೆಯ ಪ್ರಾಯದಲ್ಲಿಯೇ ಭಾವುಸಾಹೇಬರಿಂದ ನಾಮದೀಕ್ಷೆ ಪಡೆದು ಆಧ್ಯಾತ್ಮದ ಅನುಸಂಧಾನತ್ತ ಅಕರ್ಷಿತಳಾಗಿದ್ದಳು. ಅಷ್ಟರಲ್ಲಾಗಲೇ ವಯೋಸಹಜ ಗುಣಗಳಂತೆ ಸಮಾಜದ ಕಟ್ಟುಪಾಡಿಗೆ ಒಳಗಾಗಿ ಕರಬಸಯ್ಯನೊಂದಿಗೆ ಮದುವೆಯಾಗಿ ಕೌಟುಂಬಿಕ ಭವಣೆಯಲ್ಲಿ ಬೆಂದು ಹುಟ್ಟಿದ ಎರಡು ಮಕ್ಕಳನ್ನು ಕಳೆದುಕೊಂಡು ಪ್ರಾಪಂಚಿಕ ಬದುಕಿನಲ್ಲಿ ಆಸಕ್ತಿ ಕಳೆದುಕೊಂಡು ದೀಕ್ಷಾಗುರುವಾಗಿದ್ದ ಭಾವುಸಾಹೇಬ ಮಹಾರಾಜರ ಸನ್ನಿಧಿಗೆ ಬಂದು ಆಧ್ಯಾತ್ಮ ಸಾಧನೆಯಲ್ಲಿ ನಿರತಳಾಗುತ್ತಾಳೆ. ಅಲ್ಲಿ ತಾನಗಾದ ಅನುಭಾವಿಕ ಸುಳುಹುಗಳನ್ನು ಪದಕಟ್ಟಿ ಹಾಡುತ್ತಾಳೆ.

ತಾವರೆಕೆರೆ ವೀರದಾಸಮ್ಮಳು ಕನ್ನಡದ ಅಪರೂಪದ ತತ್ವಪದಕಾರ್ತಿ ರಾಮಾವಧೂತರ ಶಿಷ್ಯಳು, ಸಂಸಾರದಿಂದ ಮತ್ತು ತವರಿನಿಂದಲೂ ತಿರಸ್ಕರಗೊಂಡು ಸಮಾಜದಿಂದಲೂ ಬಹಿಷ್ಕರಿಸಿಕೊಂಡು ದೇಶಾಂತರತಿರುಗಿ ಸಾದು–ಸಂತರ ನೆರೆಳಲ್ಲಿ ಬೆಳೆದ ಈಕೆ ಕೋಲಾರದ ಸುತ್ತ–ಮುತ್ತ ವೀಳ್ಯೆದೆಲೆ ವ್ಯಾಪಾರ ಮಾಡಿಕೊಂಡು ಇರುತ್ತಾಳೆ. ಹೊತ್ತು ಮುಳುಗುವ ಹೊತ್ತಿಗೆ ಹೆಣ್ಣೆಂಬ ಕಾರಣಕ್ಕಾಗಿ ಸಮಾಜದ ಕಾಕದೃಷ್ಟಿಗೆ ಬಲಿಯಾಗುತ್ತ ಬೆಸತ್ತ ವೀರದಾಸಮ್ಮ ಗುರು ರಾಮಾವಧೂತರ ಬಳಿಗೆ ಬಂದು ಅವರಿಂದಲೇ ದೀಕ್ಷೇ ಪಡೆದುಕೊಂಡು ಪದ ರಚಿಸುತ್ತಾಳೆ. ವಿಭಿನ್ನ ಧರ್ಮದ ವಿಭಿನ್ನ ಸಂಸ್ಕೃತಿಯ ಫೈಮುದಾ ಫಾತಿಮಾಳು ಬಡ ಮುಸ್ಲಿಂ ಕುಟುಂಬದ ಹುಡುಗಿ ತಂದೆ ಬಿಸ್ಮಿಲ್ಲಾಖಾನ್‌ರನ್ನು ತನ್ನ ಪದದ ಅಂಕಿತವಾಗಿ ಬಳಸಿಕೊಂಡು ಈಕೆ ಸಂಸಾರದ ಬಂಡಿ ಸಾಗಿಸಲು ನೆರೆಹೊರೆ ಮನೆಯ ಕಸಮುಸುರಿ ತೊಳೆದು ತಾಕಂಡ ಅನುಭಾವವನ್ನು ಪದದರೂಪದಲ್ಲಿ ಹಾಡಿ ಪ್ರಗತಿಪರಳೆನಿಸಿಕೊಂಡಿದ್ದಾಳೆ.

ನನ್ನ ಲೇಖನದ ಪ್ರಮುಖ ಐದು ತತ್ವಪದಗಾರ್ತಿಯರ ಕಿರು ಪರಿಚಯದೊಂದಿಗೆ ಲೇಖನದ ಶಿರ್ಷಿಕೆಗೆ ಅನುಗುಣವಾಗಿ ಮುಂದೆ ಚರ್ಚಿಸಲಾಗಿದೆ. ಬಿದನೂರಿನ ಗಂಗಮ್ಮ ಬಾಲ್ಯವಿವಾಹ ಎಂಬ ಅನಿಷ್ಟಕ್ಕೆ ಬಲಿಯಾಗಿ ಎಳೆ ವಯಸ್ಸಿನಲ್ಲಿಯೇ ವೈದವ್ಯ ಪ್ರಾಪ್ತಿಯಾಗಿ ಸಮಾಜದ ಕಟ್ಟಳೆಗಳಿಗೆ ಒಳಗಾದವಳು ತನ್ನ ಹುಟ್ಟುರನ್ನು ಬಿಟ್ಟು ಬಂದ ಗಂಗಮ್ಮ ಒಂಟಿಯಾಗಿ ಅಲೆಮಾರಿಯಂತೆ ಊರೂರು ತಿರುಗಿ ಕೊನೆಗೆ ವಿರೂಪಾಕ್ಷರ ಆಶ್ರಯ ಪಡೆದು ಅವರೋಡನೆ ಅನುರಕ್ತಳಾದ ಅನುಭಾವನ್ನು ಈ ಪದದ ಮೂಲಕ ಸಾರಿದ್ದಾರೆ.

"ಅಂಗ ಲಿಂಗದ ಸಂಗ ಬಿಡಿಸದನ

ನಿಸ್ಸಂಗ ನಿರಾಳ ಮಾಡಿದನ

ಶಿವಲಿಂಗ ಶಂಭೋ ರಸಿಕನ

ಎನ್ನಲಿಂಗದೊಳಗೆ ಅಡಗಿ ಬಯಲಾದನ

ಗುರು ಬಿದನೂರ ವಿರೂಪಾಕ್ಷನ

ಆತನ ಉದರದಿ ಮಡಿವಾಳ ಜನಿಸಿದನ"

[ಬಿದನೂರ ಗಂಗಮ್ಮ][1]

ಕಿಶೋರವಸ್ಥೆಯಲ್ಲಿ ಬಾಲವಿಧವೆಯಾಗಿ ತನ್ನ ಹುಟ್ಟುರು ನಾಗರಣ ಬರಗಾಲಕ್ಕೆ ತುತ್ತಾದ ಕಾರಣ ಮುಪ್ಪಿನ ತಂದೆಯೊಡನೆ ಬಿದನೂರಿಗೆ ಬಂದು ನೆಲೆಸುತ್ತಾಳೆ. ಗಟ್ಟಿಗಿತ್ತಿಯಾದ ಈಕೆ ಕೂಲಿ ನಾಲಿ ಮಾಡಿ ಜೀವನ ನೆಡೆಸುತ್ತಿರುತ್ತಾಳೆ. ದಿನಗಳದಂತೆ ಗಂಗಮ್ಮ ಸಂನ್ಯಾಸಿ ವಿರೂಪಾಕ್ಷರ ದರ್ಶನವಾಗಿ ಅವರನ್ನೆ ಗುರುಗಳಾಗಿ ಸ್ವಿಕರಿಸಿ ಆಶ್ರಯ ಪಡೆಯುತ್ತಾಳೆ. ಅಂದಿನ ಮಡಿವಂತ ಸಮಾಜದಲ್ಲಿ ವಿಧವೆಯೊರ್ವಳು ಮಗುವಿಗೆ ಜನ್ಮಕೊಡುವುದು ಅದೆಂಥ ಅವಗಡಕ್ಕೆ ತುತ್ತು ಮಾಡಿತೆಂದರೆ. ಸಮಾಜವೆಲ್ಲವೂ ಆಕೆ ಜಾರೆಯೆಂದು ಟೀಕೆ ಮಾಡಲಾರಂಭಿಸಿತು. ಇಂತಹ ಪರಿಸ್ಥಿಯಲ್ಲಿ ಎದೆಗುಂದದ ಗಂಗಮ್ಮ 'ಜಾರತನವ ಮಾಡಿದೆನಮ್ಮ' ಎಂಬ ತತ್ವಪದ ರಚಿಸಿ ಲೋಕದ ಬಾಯಿ ಮುಚ್ಚಿಸಿದಳು. ಜಾರೆ ಎಂಬುದು ಒತ್ತಾಯದ ಬೋಗದಿಂದಲೊ ಅಥವಾ ಮನಸ್ಸಿನ ಬಯಕೆಯಿಂದಲೊ, ಹಣ ಆಸ್ಥಿಯ ಆಸೆಯಿಂದಲೊ ಪರ ಪುರುಷರೊಡನೆ ಕೂಡಿದರೆ ಅದು ಜಾರತನ ಆದರೆ ನಾನು ಮನೊಯಿಚ್ಚೆಯಿಂದ ತುಂಬಾ ಎಚ್ಚರದಿಂದ ಪ್ರೀತಿಸಿ ಅವರೊಡನೆ ಅನುರಕ್ತಳಾಗಿ ಕಡಕೋಳ ಮಡಿವಾಳಪ್ಪನಿಗೆ ಜನ್ಮವಿತ್ತಿದ್ದೇನೆ, ಇದನ್ನು ಲೋಕ ಜಾರತನವೆಂದರೆ ನನಗೇನು? ಲೋಕದಿಂದ ನನಾಬೇಕಾದುದು ಏನು ಎನ್ನುತ್ತಾ ಗುರು ವಿರೂಪಾಕ್ಷರು ನನಗೆ ವೈದ್ಯವ್ಯದ ಭ್ರಾಂತಿ, ಮನಸ್ಸಿನ ಭ್ರಮೆ, ಕಳೆದುಹೋದ ದಿನಗಳ ಕನಸನ್ನು ದೂರ ಮಾಡಿದರು. ಸತ್ಯ–ಮಿಥ್ಯಗಳ ಅರಿವನ್ನು ಮಾಡಿಸಿ ಭಕ್ತಿಯ ಆಧ್ಯಾತ್ಮಿಕತೆಯಲ್ಲಿ ಐಕ್ಯ ಮಾಡಿದರು. ಎನ್ನುತ್ತಾ ಗುರುವಿನೊಡನೆ ಕಳೆದ ಅನುಭಾವವನ್ನು ಪದವಾಗಿಇಲ್ಲಿ ರಚಿಸಿದ್ದಾಳೆ.

"ಏನು ಅನುಭವದಾಟ ನೋಡಯ್ಯಾ ಆಧಾರದೊಳು

ಬಲಿಸಿ ನಮ ಗೆಲಿಸಿ ಬಿಟ್ಟಯ್ಯಾ

ಆಗ ಮಾಡಿದ ಹೋಗದ್ಯೆಶಿರಿ ಈಗ ಇಲ್ಲೇ ನೋಡಿರಯ್ಯಾ

ಏನು ಹೇಳಲಿ ಗುರುಕೀಲಾದೇವರೂಪನೆ ಆದನಲ್ಲಾ" [ಜತ್ತ ಶಿವಲಿಂಗವ್ವ][2]

ಮಹಾರಾಷ್ಟ್ರದ ಜತ್ತ ಎಂಬ ಹಳ್ಳಿಯಲ್ಲಿ ರಾಚಯ್ಯ ಮತ್ತು ಬಸವ್ವಳ ದಂಪತಿಗಳಿಗೆ ಮೂರನೇ ಮಗಳಾಗಿ ಜನಿಸಿದ ಜತ್ತ ಶಿವಲಿಂಗವ್ವ ಏನೂ ಅರಿಯದ ಪುಟ್ಟಪೋರಿ ವಿಜಯಪುರದ ಇಂಚಗೇರಿ ಮಠದ ಭಾವುಸಾಹೇಬರು ರಾಚಯ್ಯಸ್ವಾಮಿಗಳ ಮಠದಲ್ಲಿ ಆಗಾಗ ಕೆಲಸದ ನಿಮಿತ್ತ ಬಂದು ಉಳಿಯುತ್ತಿದ್ದರು ಅಲ್ಲಿಯೇ ಆಟವಾಡುತ್ತಿದ್ದ ಶಿವಲಿಂಗವ್ವನನ್ನು ಕಂಡು ನಾಮದೀಕ್ಷೆ ನೀಡಿ ಆಧ್ಯಾತ್ಮಕತೆಯತ್ತ ಒಲವು ತೋರುವಂತೆ ಅಜ್ಞಾಪಿಸಿದರು ಶಿವಲಿಂಗವ್ವ ಅಧ್ಯಾತ್ಮದತ್ತ ಹೊರಳುವಷ್ಟರಲ್ಲಿ ಅಂದಿನ ಸಂಪ್ರದಾಯದಂತೆ ಆಕೆಗೆ ಮದುವೆ ಮಾಡಲಾಗುತ್ತದೆ. ಇಷ್ಟವಿಲ್ಲದ ಸಂಸಾರದ ಬಂಡಿಯನ್ನು ಕಷ್ಟದಲ್ಲಿ ಸಾಗಿಸುತ್ತಾ, ದುಂಡಯ್ಯಾ ಮತ್ತು ಭಾಗವ್ವ ಇಬ್ಬರು ಮಕ್ಕಳಿಗೆ ಜನ್ಮವಿತ್ತಳು ಮಕ್ಕಳ ಪ್ರೀತಿಯಲ್ಲಿ ಬದುಕಿನ ಅರ್ಥ ಕಂಡುಕೊಳ್ಳುತ್ತಿದ್ದ ಶಿವಲಿಂಗವ್ವಳಿಗೆ ವಿಧಿಯಾಟವೆಂಬಂತೆ ಮಕ್ಕಳಿರ್ವರು ಅಕಾಲಿಕ ಮರಣ ಹೊಂದಿದ್ದರು. ಈ ಘಟನೆಯಿಂದ ಬೆಸತ್ತ ಶಿವಲಿಂಗವ್ವ ಸಂಪೂರ್ಣವಾಗಿ ಲೌಕಿಕ ಬದುಕನ್ನು ತ್ಯಜಿಸಿ ಗುರು ವೆಂಕಟೇಶರ ಬಳಿಗೆ ಬಂದು ಆಧ್ಯಾತ್ಮಿಕ ಸಾಧನೆಯತ್ತ ಗಮನ ನೀಡುವಂತೆ ಕರೆಕೊಟ್ಟು ಭಾವು ಸಾಹೇಬ ಮಹಾರಾಜರನನ್ನು ಈ ಪದದ ಮೂಲಕ ಸ್ಮರಿಸುತ್ತಾ ಭಕ್ತಿಯ ಪಾರಮ್ಯದಿಂದ ಪಡೆದ ಅನುಭಾವಿಕ ಸುಳುಹುಗಳನ್ನು ಹೇಳುತ್ತಿದ್ದಾಳೆ. ಶಿವಲಿಂಗವ್ವಳ ಗುರುಭಕ್ತಿ ಈ ಪದದಲ್ಲಿ ಮಡುಗಟ್ಟಿದು. ಈಕೆಯ ಪ್ರಕಾರಗುರು ಶಿವನಿಗಿಂತ ಮೇಲು ಹಾಗಾಗಿ ಈಕೆ ಭಾವುಸಾಹೇಬರಿಗೆ ದೇವರ ಸ್ಥಾನ ನೀಡಿ ಗೌರವಿಸಿದ್ದಾಳೆ. ಗುರು ಎನ್ನಲ್ಲಿ ಪ್ರಾಪಂಚಿಕ ಬದುಕಿನ ಮಿಥ್ಯವನ್ನು ತಿಳಿಸಿ ಲೌಕಿಕ ಬದುಕಿನ ಬವಣೆಗಳಿಂದ ಬೇಸತ್ತಿದ್ದ ನನಗೆ ಭಕ್ತಿಯ ಮಾರ್ಗ ತೋರಿ ಆಧ್ಯಾತ್ಮಿಕ ಸಾಧಿಸಲು ಮಾರ್ಗತೋರಿದ ಗುರುವಿನೊಡಗಿನ ಚರ್ಚೆಗಳನ್ನು ಅನುಭಾವದಾಟವನ್ನು ಇಲ್ಲಿ ಹಾಡಿದ್ದಾಳೆ.

"ವೇದ ಆಗಮಗಳಿಗೆ ಆದಿಯಾಗಿರುತಿರ್ಪ

ವಾದ ಮಾಡಿದೆ ಎನಗೆ ವರವ 'ಕೊಟ್ಟು

ಭೇದವಿಲ್ಲದೆ ನಿನ ಪಾದ ಸೇವೆಯೊಳಿರಿಸಿ

ಸಾಧು ಪಾಲನೆ ವೀರದಾಸಿಯ ಸಲಹೋ ಈ ಮಾಯಾ"

[ತಾವರೆಕೆರೆ ವೀರದಾಸಮ್ಮ][3]

ರಾಮಾವಧೂತರ ಶಿಷ್ಯಳಾದ ತಾವರೆಕೆರೆ ವೀರದಾಸಮ್ಮ ಕೋಲಾರ ಜಿಲ್ಲೆಯ ತಾವರೆಕೆರೆಯವಳು ಬಾಲ್ಯದಲ್ಲಿಯೆ ವಿಲಕ್ಷಣ ಬುದ್ಧಿಯುಳ್ಳವಳಾದ ವೀರದಾಸಮ್ಮ ಸಂಸಾರದಲ್ಲಿ ಬಳಲಿ ಗಂಡನಿಂದ ತಿರಸ್ಕರಿಸಲ್ಪಟ್ಟು, ತವರು ಮನೆಗೆ ಬಂದಂತಹ ಸಂದರ್ಭದಲ್ಲಿಯೂ ಅಲ್ಲಿಯೂ ಆಕೆಯನ್ನು ಹೊರದೂಡಲಾಗುತ್ತದೆ. ಆಕೆಯ ಸ್ಥಿತಿಗೆ ಸಮಾಜವು

ಮರುಗದೆ ಬಹಿಸ್ಕಾರ ಮಾಡುತ್ತದೆ. ಅಲ್ಲಿಂದ ವೀರದಾಸಮ್ಮ ದೇಶಾಂತರ ತಿರುಗುತ್ತಾ ಸಾಧು–ಸಂತ– ಅವದೂತರ ಆಶ್ರಯದಲ್ಲಿ ಬೆಳೆದು ಕೊನೆಗೆ ವಿಳ್ಯದೆಲೆ ವ್ಯಾಪಾರಿಯಾಗಿ ಕೋಲಾರದ ಹಳ್ಳಿಗಳಲ್ಲಿ ನೆಲೆಸುತ್ತಾಳೆ. ರಾತ್ರಿಯ ವೇಳೆಯಲ್ಲಿ ಹೆಣ್ಣೆಂಬ ಕಾರಣಕ್ಕೆ ಸಮಾಜದ ಕಾಕಾನೋಟಕ್ಕೆ ಬಲಿಯಾಗಿ ಬೇಸತ್ತು ನೊಂದ ವೀರದಾಸಮ್ಮ ಆಧ್ಯಾತ್ಮದ ಗುರುವಾಗಿದ್ದ ರಾಮಾವಧೂತರ ಬಳಿಗೆ ಬಂದು ದೀಕ್ಷೆ ಪಡೆದು ಆಧ್ಯಾತ್ಮಿಕ, ಸಾಧನೆಯಲ್ಲಿ ನಿರತಳಾಗಿ ಲೋಕದ ಎಲ್ಲಾ ಸಂಬಂಧಗಳನ್ನು ಗುರುಮಾರ್ಗದಲ್ಲಿ ಕಂಡುಕೊಂಡು ಪದ ರಚಿಸುತ್ತಾಳೆ.

ಗುರುಭಕ್ತಿಯ ಭಯಕೆಯಿಂದ ಲೌಕಿಕ ಜೀವನವನ್ನು ಮಾಯೆಗೆ ಹೋಲಿಕೆ ಮಾಡುತ್ತಿರುವ ವೀರದಾಸಮ್ಮ ಆಧ್ಯಾತ್ಮಿಕತೆಯತ್ತ ಒಲವು ತೋರಿದ್ದಾಳೆ. ಈ ಲೌಕಿಕ ಬದುಕಿನಲ್ಲಿ ನೊಂದು–ಬೆಂದಿರುವ ಕುಟುಂಬದ ಸಂಪ್ರಾದಾಯದಂತೆ ಮದುವೆಯಾಗಿ ಗಂಡ–ತವರುಮನೆ, ಊರು–ಕೇರಿಜನರನ್ನು ಬಿಟ್ಟು ಬಂದಿರುವೆ. ಪ್ರಾಯದಲ್ಲಿ ಶಿವಪೂಜೆ ಮಾಡದೆ ಇಳೆಯ ಜನರೊಡಗೂಡಿ ಕಾಲ ಕಳೆದು ಬಳಲಿರುವೆ, ಕಾಯವ ತಿಳಿಯದೆ ದಾರಿತಪ್ಪಿ ನಡೆದು ಊರಿನಿಂದ ಬಹಿಷ್ಕೃತಳಾದೆ. ತಂದೆ–ತಾಯಿಯ ರೂಪವಾಗಿ ಎನ್ನ ಸಲವು, ಗುರು ಸೇವೆ ಮಾಡದೆ ಪತಿ ಸೇವೆಯ ಮಾಡಲು ದಾರಿ ಮಾಡಿಕೊಡು ನಿನ್ನ ಪಾದವ ನಂಬಿರುವೆ ಕರುಣಿಸು ದೇವ ನಿನ್ನ ಪಾದಸೇವೆಗೆ ಅನುವು ಮಾಡಿಕೊಡು ಎನ್ನ ಸಲವೊ ಪರಮಾತ್ಮ ಎಂದು ಬೇಡಿಕೊಳ್ಳುತ್ತಾ ತನ್ನ ಲೌಕಿಕ ಬದುಕಿನ ಅನುಭಾವವನ್ನು ಇಲ್ಲಿ ಗುರುಭಕ್ತಿಯ ಸಾಧನೆಯಲ್ಲಿ ಹೇಳಿಕೊಳ್ಳುತ್ತಿದ್ದಾಳೆ.

"ಅಕ್ಕಸಾಲಿಗ ಬಂದ ನೋಡಮ್ಮ/ತಂಗೆಮ್ಮ
ಅಕ್ಕಸಾಲಿಗ ಬಂದ ನೋಡಮ್ಮ"

[ರಾಯಚೂರಿನ ಹನುಮಂತವ್ವ][4]

ಹನುಮಂತವ್ವ ವ್ಯಾಪಾರಿ ಕುಟುಂಬದ ಶ್ರೀಮಂತೆಯಾಗಿ ಜೀವನ ನೆಡೆಸುತ್ತಿದ್ದು ಸುಖ ಸಂಸಾರದಲ್ಲಿ ಐದು ಮಕ್ಕಳ ಪಡೆದಳು. ಐದು ಮಕ್ಕಳ ಸಾವಿನಿಂದ ನೊಂದ ಹನುಮಂತವ್ವಳಿಗೆ ಆಸರೆ ನೀಡಿದ್ದು ವೆಂಕಮ್ಮಾವಧೂತೆ ಈಕೆ ಹನುಮಂತವ್ವಳಿಗೆ ಪ್ರಾಪಂಚಿಕ ದಿನ ನಿತ್ಯ ಬದುಕಿನ ಮಿತಿಗಳನ್ನು ಹೇಳಿ ಸಾಂತ್ವನ ತುಂಬಿ ಆಧ್ಯಾತ್ಮಕ ಒಲವು ಮೂಡುವಂತೆ ಮಾಡಿದಳು. ಲೌಕಿಕ ಬದುಕಿನದ್ದಕ್ಕೂ ಸಾಂಸಾರಿಕ ಜೀವನದಲ್ಲಿ ಕಂಡುಂಡ ನೋವುಗಳಿಂದ ಹನುಮಂತವ್ವನನ್ನು ದೂರಮಾಡಿ ಭಕ್ತಿಯಿಂದ ಮುಕ್ತಿ ಪಡಿಯಬೇಕೆಂದು ಕರೆನೀಡಿದರು. ಹನುಮಂತವ್ವ ತನ್ನ ನಿತ್ಯ ಬದುಕಿನಲ್ಲಿ ಕಂಡ ಮಕ್ಕಳ ಸಾವು, ಪತಿಗೆ ಬೇರೆ ವಿವಾಹ ಮಾಡಿಸಿ ಮಠದ ಆಶ್ರಯ ಮಡೆದ ಅನುಭಾವವನ್ನು ಇಲ್ಲಿ ಸ್ಮರಿಸಿದ್ದಾಳೆ.

"ಮಾತೆಯೇ ಮೊದಲು ದೈವವಾಗಿರಲು

ಪಿತ ದೇವನೆಂಬ ಶೃತಿಯು ಇರಲು

ಗುರು ವೆಂಕಟೇಶ ತ್ರಿಮೂರ್ತಿಗಳ ಮರೆತು

DOI: 10.59176
http://www.kristujayantijournal.com/index.php/KJKSP

ಭವದ ಶಿಲೆಗಳಿಗೆರಗಿ ಬಳಲುತ ನೀನು"

[ರಾಯಚೂರಿನ ಹನುಮಂತವ್ವ][5]

ಹನುಮಂತವ್ವ ವೆಂಕಮ್ಮಾವಧೂತೆಯಾದ ಮಹಿಳಾ ಗುರುವನ್ನು ಪುಲ್ಲಿಂಗ ವಚನದಲ್ಲಿ ಸಂಭೋದಿಸಿದ್ದಾಳೆ. ಪ್ರಸ್ತುತ ಪದದಲ್ಲಿ ಹುಟ್ಟಿದ ಪ್ರತಿಯೊರ್ವರಲ್ಲೂ. ನಾನು ನಾನೆಂಬ ಆಹಂಕಾರ, ಎಲ್ಲವೂ ನನಗೆ ಬೇಕೆಂಬ ಅತಿಆಸೆ, ಮೌಢ್ಯ, ಎಲ್ಲವನ್ನು ತ್ಯಜಿಸಿ ಧರೆಗೆ ದೊಡ್ಡವನಾದ ದೇವರ ಸ್ವರೂಪಿ ವೆಂಕಮ್ಮಾಧೂತೆಯನ್ನು ಪೂಜಿಸು ಎನ್ನುತ್ತಾಳೆ. ನೀ ಬರುವಾಗ ಹೋಗುವಾಗ ಎನು ತುರುವುದಿಲ್ಲ ಹಾಗೆ ಏನನ್ನು ತೆಗೆದುಕೊಂಡು ಹೋಗುವುದಿಲ್ಲ ಹಾಗಾಗಿ ಇರುವಷ್ಟು ದಿನ ತಂದೆ–ತಾಯಿ–ಗುರು ವೆಂಕಟೇಶನನ್ನು ನೆನೆದು ಮೂವರ ಸೇವೆ ಮಾಡಿ ಆಧ್ಯಾತ್ಮಕ ಸಾಧನೆಯನ್ನು ಪಡಿ ಎಂದು ಹೇಳುತ್ತಿದ್ದಾರೆ. ಹನುಮಂತವ್ವ ಜೀವತಾವಧಿಯಲ್ಲಿ, ಪತಿ ವಿವಾಹದ ಪ್ರಗತಿಪರ ಚಿಂತನೆ ಗುರುವಿನ ಮರಣ ಈ ಎಲಾ ಅನುಭಾವವದ ಸನ್ನಿವೇಶವು ಪದವಾಗಿ ಮೂಡಿಬಂದಿದೆ.

ಬಸವಕಲ್ಯಾಣದ ಫೈಮುದಾ ಫೌತಿಮಾ ಮುಸ್ಲಿಂ ಕುಟುಂಬದ ಬಡಹುಡುಗಿ ಊರಿನ ಮುಸ್ತಾರುದ್ದೀನ್‌ನೊಂದಿಗೆ ವಿವಾಹವಾಗಿ ಐದು ಹೆಣ್ಣು ಮೂರು ಗಂಡು ಮಕ್ಕಳನ್ನು ಪಡೆದು ಬದುಕಿನ ಬಂಡಿ ಸಾಗಿಸಲಾರದ ಕಿತ್ತುತಿನ್ನುವ ಬಡತನದಿಂದ ತಾನೂ ಕೂಡ ನೆರೆಹೊರೆಯ ಮನೆಗಳಲ್ಲಿ ಕಸ ಮುಸರೆ ತಿಕ್ಕುವ ಚಾಕರಿ ಮಾಡುತ್ತಾ ತಾನು ಅನುಭವಿಸಿದ ಎಲ್ಲಾ ಘಟನೆಗಳನ್ನು ಹಾಡುತ್ತಾ ಪದ ಕಟ್ಟಿದ್ದಾಳೆ.

"ಪಾಶಾನ ಮಗಳಾದೆ ನಾ

ಅಲ್ಲನ ಮಗಳಾದೆ

ಪಾಶಾ ಅಲ್ಲಾ ಸಬಕೀ ಹರಕಿ ನಾ ಪಡಕೊಂಡೆ"

[ಫೈಮುದಾ ಫಾತಿಮಾ][6]

ಪ್ರಸುತ್ತ ಪದದಲ್ಲಿ ಫಾತಿಮಾ ತನ್ನ ಹುಟ್ಟಿಗೆ ಕಾರಣಕರ್ತರಾದ ತಂದೆಗೆ ಗುರುವಿನ ಸ್ಥಾನ ನೀಡಿ ದೇವರಂತೆ ಬಿಸ್ಮಿಲ್ಲಾಖಾನ್‌ರನ್ನು ನೆನೆದಿದ್ದಾಳೆ. ತನ್ನ ತನು–ಮನ ಬುದ್ದಿ–ಭಾವಗಳ ಶುದ್ದಿಗಾಗಿ ಪಂಚೇಂದ್ರಿಯಗಳ ಆಸೆ ತೊರೆದು ಹಿಡಿತದಲ್ಲಿಟ್ಟುಕೊಂಡು ಅಷ್ಟಾಂಗ ಮಾರ್ಗಗಳನ್ನು ಅನುಸರಿಸಿ ಗುರುಭಕ್ತಿ ಪಡೆದಿದ್ದಾಳೆ. ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳಾದ ಆರು ಗುಣಗಳನ್ನು ತೊರೆದು ಅಲ್ಲಾನ ಮಗಳಾಗಿ ಅಲ್ಲಾನ ಧ್ಯಾನದಲ್ಲಿ ಮಗ್ನಳಾಗಿ ಬದುಕಿನ ಬಂಡಿಯ ಸಾಗಿಸುತ್ತಿರುವೆ. ಹೀಗೆ ಆರುಗುಣ, ಅಷ್ಟಾಂಗ ಮಾರ್ಗ ಮತ್ತು ಪಂಚೇಂದ್ರಿಯಗಳನ್ನು ಹಿಡಿತದಲ್ಲಿರಿಸಿಕೊಂಡು ನಾನು ಗುರುವಿನ ಭಕ್ತಳಾಗಿ ಆಧ್ಯಾತ್ಮಿಕತೆಯ ಹಾದಿಯ ತಲುಪಿ ಅಲ್ಲಾನ ಮಗಳಾದೆ ಎಂದು ಹೇಳುತ್ತಾಳೆ. ಲೋಕದಲ್ಲಿ ತಾನು ಅನುಭವಿಸಿದ ಲೌಕಿಕ ಬದುಕನ್ನು ತಮ್ಮ ಪದದಲ್ಲಿ ಅನುಭಾವದ ಸುಳುಹುಗಳಲ್ಲಿ ಈ ಪದದಲ್ಲಿ ಕಟ್ಟಿಕೊಟ್ಟಿದ್ದಾಳೆ.

## ಉಪಸಂಹಾರ

ಸಾಮಾನ್ಯ ಲೌಕಿಕ ಜೀವನದ ಲೋಕಾನುಭವಕ್ಕಿಂತ ವಿಭಿನ್ನ ನೆಲೆಗಳ ಸೂಕ್ಷ್ಮ ವಿವರಗಳನ್ನು ಬಿದನೂರಿನ ಗಂಗಮ್ಮ, ರಾಯಚೂರಿನ ಹನುಂತವ್ವ, ತಾವರೆಕೆರೆಯ ವೀರದಾಸಮ್ಮ, ಫೈಮುದಾ ಫಾತಿಮಾ, ಜತ್ತ ಶಿವಲಿಂಗವ್ವ ತಮ್ಮ ತತ್ವಪದಗಳಲ್ಲಿ ಪ್ರಸ್ತಾಪಿಸಿದ್ದಾರೆ. ಇಲ್ಲಿಯ ತತ್ವ ಪದಗಾರ್ತಿಯರು ಲೋಕ ರೂಢಿ ಜೀವನದ ಅನುಭವ ಪಥದಲ್ಲಿ ಕಂಡುಂಡ ಅನುಭಾವವನ್ನು ಸಾಹಿತ್ಯರೂಪದಲ್ಲಿ ಹಿಡಿದಿಟ್ಟು ಪದ ರಚಿಸಿ ಮೌನ ಮುರಿದಿದ್ದಾರೆ. ತತ್ವಪದಕಾರರು ನೀಡಿದ ಆಶ್ರಯ, ಪ್ರೋತ್ಸಾಹದಿಂದ ಇವರು ಪುರುಷ ತತ್ವಪದಕಾರರನ್ನು ಗುರುಗಳಾಗಿ ಸ್ವೀಕರಿಸಿ ಗುರುಭಕ್ತಿಯನ್ನು ಪಡೆದು ಪದಕಟ್ಟಿ ಹಾಡಿದರು ಲೋಕರೂಡಿಯ ಪದಗಳ ಅರ್ಥವನ್ನು ಮೀರಿದ ಆಧ್ಯಾತ್ಮಿಕ ಸಾಧನೆಯಲ್ಲಿ ಸಾಧಿಸಿದ ಅನುಭಾವಗಳನ್ನು ಪದಗಳ ಮೂಲಕ ಸಾರಿದ್ದಾರೆ.

ತತ್ವಪದಗಾರ್ತಿಯರ ಮೇಲೆ ವಚನಕಾರರ ಪ್ರಭಾವವೆ ಹೆಚ್ಚು ಫಾತಿಮಾ, ಹನುಮಂತವ್ವ, ರಾಚಮ್ಮ ಮುಂತಾದ ತತ್ವಪದಗಾರ್ತಿಯರು ಬಸವ ಕಲ್ಯಾಣದವರೆ ಆಗಿದ್ದು, ಅನುಭವ ಮಂಟಪದಲ್ಲಿ ಜರುಗುತ್ತಿದ್ದ ವಚನ ವಾಗ್ಮಯವು ಹಾಗೂ ಬಸವ ಕಲ್ಯಾಣದಲ್ಲಿ ನಡೆಯುತ್ತಿದ್ದ ಸಾಮಾಜಿಕ ಚಳುವಳಿಯ ಪ್ರಭಾವ ಪ್ರೇರಣೆಯಿಂದ ತತ್ವಪದಗಾರ್ತಿಯರಲ್ಲಿ ಮಾನಸಿಕ ಧೈರ್ಯ ತುಂಬಿತ್ತು ಜೊತೆಜೊತೆಗೆ ತತ್ವಪದಕಾರರ ಪ್ರೋತ್ಸಹವು ಇವರಿಗೆ ದೊರಕಿ ತತ್ವಪದ ರಚನೆಗೆ ಅವಕಾಶ ದೊರಕಿ ಪದಗಳನ್ನು ಹಾಡುತ್ತಾ ಭಜನಾಮೇಳಗಳಲ್ಲಿ ಭಾಗವಹಿಸಿ ತತ್ವಪದಗಳನ್ನು ಹಾಡಿ ಜನಮನ್ನಣೆ ಪಡೆದರು. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯು ಎರಡನೇ ದರ್ಜೆಯವಳಾಗಿ ಗುರುತ್ತಿಸಲ್ಪಡುತ್ತಿದ್ದಾಳೆ ಇಂತಹ ಸಂದಿಗ್ದ ಪರಿಸ್ಥಿಯಲ್ಲಿ ಮಹಿಳೆಯರು ತಮ್ಮ ಅನುಭವಗಳನ್ನು ಸಮಾಜದ ಮುಂದಿಡಲಾಗದೆ ಗೌಪ್ಯವಾಗಿರಿಸಿಕೊಂಡು ಜೀವನ ನಡೆಸುತ್ತಿದ್ದಾರೆ. ಅಂತಹ ಮಹಿಳೆಯರಿಗೆ ದನಿಯಾಗಿಯು, ಸಾಹಿತ್ಯ ರಚಿಸುವ ಮಹಿಳೆಯರಿಗೆ ಮಾದರಿಯಾಗಿಯೂ ಪ್ರಸ್ತುತ ಲೇಖನದ ತತ್ವಪದಗಾರ್ತಿಯರ ಅಧ್ಯಯನ ಪ್ರಮುಖವೆನಿಸುತ್ತದೆ. ಈ ತತ್ವಪದಗಾರ್ತಿಯರ ಭಾಷೆ ಜನಪದ ಭಾಷೆಯಾಗಿದ್ದು ಸುಲಲಿತವಾಗಿ ರಚಿಸಲು ಸಾದ್ಯ ಮತ್ತು ಮಹಿಳೆಯರು ತಮ್ಮ ಮನೋಭಾವನೆಗಳನ್ನು ಸಮಾಜದ ಮುಂದಿಡಬಹುದು.

### ಕೊನೆಟಿಪ್ಪಣಿ:

1. ಮಹಿಳಾ ತತ್ವಪದಗಳು, ಮೀನಾಕ್ಷಿ ಬಾಳಿ, 2017, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಬೆಂಗಳೂರು, 37.
2. ಅದೇ ಕೃತಿ, 71.
3. ಅದೇ ಕೃತಿ, 77.
4. ಅದೇ ಕೃತಿ, 117.
5. ಅದೇ ಕೃತಿ, 119.
6. ಅದೇ ಕೃತಿ, 160.

### ಸಂಪಾದನಾ ಕೃತಿಗಳು:

1. ಮಹಿಳಾ ತತ್ವಪದಗಳು, ಮೀನಾಕ್ಷಿ ಬಾಳಿ, 2017, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಬೆಂಗಳೂರು.
2. ತತ್ವಪದ ಪ್ರವೇಶಿಕೆ, ರಹಮತ್ ತರೀಕೆರೆ, 2017, ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ, ಬೆಂಗಳೂರು.

**ಪರಾಮರ್ಶನ ಗ್ರಂಥಗಳು:**

1. ನುಡಿವ ಬೆಡಗು, ಅಮರೇಶ ನುಗಡೋಣಿ, 1999, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ,
2. ಅನುಭಾವಿ ಮಹಿಳೆಯರು, ಡಾ. ವಿಜಯದೇವಿ, 2013, ಪ್ರಸಾರಾಂಗ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ವಿಜಾಪುರ,
3. ಶಿವಶರಣೆಯರ ವಚನಗಳ ವಿಭಿನ್ನ ನೆಲೆಗಳು, ಡಾ. ವೀರಣ್ಣ ಕಾಜೂರ, 2003, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ,
4 ಮಹಿಳಾ ಸಶಕ್ತೀಕರಣ; ಒಂದು ಪರಿಕಲ್ಪನೆ, ಹೇಮಲತಾ ಎಚ್. ಎಮ್, 2016, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು.